## ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ

# ಒಬ್ಬ ತಾಯಿ ನೂರು ಶಿಕ್ಷಕರಿಗೆ ಸಮ



ಮುಂಡರಗಿಯಲ್ಲಿ ಮಂಗಳವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿದರು. ಡಾ. ಅನ್ನದಾನೀಶ್ವರ ಸ್ವಾಮೀಜಿ, ಲತಾ ಮಲ್ಲಿಕಾರ್ಜುನ, ಶ್ರೀ ಮಹಾಲಿಂಗ ಸ್ವಾಮೀಜಿ ಇತರರಿದ್ದರು.

**ಮುಂಡರಗಿ:** ಜಗತ್ತಿನಲ್ಲಿ ಶ್ರೇಷ್ಠ ವ್ಯಕ್ತಿ ಎಂದರೆ ತಾಯಿ. ಒಬ್ಬ ತಾಯಿ ನೂರು ಶಿಕ್ಷಕರಿಗೆ ಸಮ. ತಾಯಿ ಋಣ ತೀರಿಸಲು ಎಂದಿಗೂ ಸಾಧ್ಯವಿಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಪಟ್ಟಣದ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಲ್ಲಿ ಅವ್ವ ಸೇವಾಟ್ರಸ್ಟ್ ಸಹಯೋಗದಲ್ಲಿ ಮಂಗಳವಾರ ಏರ್ಪಡಿಸಿದ್ದ ವಿಶೇಷ ಶಿವಾನುಭವ, ಜಗದ್ಗುರು ಅನ್ನದಾನೀಶ್ವರ ಮಠದ 9ನೇ ಪೀಠಾಧಿಪತಿ ವೆಂಕಟಾಪೂರ ಶ್ರೀಗಳ 57ನೇ ಪುಣ್ಯಸ್ಮರಣೋತ್ಸವ, ಅಲ್ಲಮಪ್ರಭುಗಳ ಹಾಗೂ ಅಕ್ಕಮಹಾದೇವಿ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

ಒಳ್ಳೆಯ ಮಕ್ಕಳು ಜನಿಸಲು ತಂದೆ-ತಾಯಿ ಪುಣ್ಯ ಮಾಡಿರಬೇಕು. ಹಾಗೆಯೇ ಒಳ್ಳೆಯ ತಂದೆ-ತಾಯಿ ಪಡೆಯಲು ಮಕ್ಕಳೂ ಪುಣ್ಯ ಮಾಡಿರಬೇಕು. ಸಂಸ್ಕಾರವಿದ್ದರೆ ಮಕ್ಕಳು ಉತ್ತಮ ರೀತಿಯಲ್ಲಿ ಬೆಳೆಯುತ್ತಾರೆ. ಮಕ್ಕಳ ಉತ್ತಮ ಭವಿಷ್ಯ ರೂಪಿಸುವಲ್ಲಿ ತಂದೆ-ತಾಯಿ ಪಾತ್ರ ಬಹುಮುಖ್ಯ. ದಕ್ಷತೆಗೆ, ಪ್ರಾಮಾಣಿಕತೆಗೆ ಬೆಲೆ ಇದೆ ಎಂದರು.

ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ ಮಾತನಾಡಿ, ಮಹಿಳೆ ಮನಸು ಮಾಡಿದರೆ ಜೀವನದಲ್ಲಿ ಏನಾದರೂ ಸಾಧಿಸಬಹುದು. ಮಹಿಳೆ ಉನ್ನತ ಗುರಿಯೊಂದಿಗೆ ಮುನ್ನಡೆದು ಯಶಸು ಸಾಧಿಸಬೇಕು. ಶಿಕ್ಷಣ, ದಾಸೋಹ ಕ್ಷೇತ್ರಕ್ಕೆ ಉತ್ತರ ಕರ್ನಾಟಕದ ಮಠಗಳ ಕೊಡುಗೆ ಅಪಾರ ಎಂದರು.

ಸಾನ್ನಿಧ್ಯ ವಹಿಸಿದ್ದ ನಾಡೋಜ ಡಾ. ಅನ್ನದಾನೀಶ್ವರ ಸ್ವಾಮೀಜಿ, ಶ್ರೀ ನಿರಂಜನ ದೇವರು, ಎಸ್.ಬಿ.ಕೆ. ಗೌಡರ, ಶಶಿ ಸಾಲಿ ಮಾತನಾಡಿದರು.

ಡಾ. ಅನ್ನದಾನೀಶ್ವರ ಶ್ರೀಗಳ ರಚನೆಯ ಮರು ಮುದ್ರಣಗೊಂಡ ಪಾರಮೇಶ್ವರಾಗಮ ಸಾರ ಗ್ರಂಥ ಬಿಡುಗಡೆಗೊಳಿಸಲಾಯಿತು. ಯುಪಿಎಸ್‌ಸಿ ಪರೀಕ್ಷೆಯಲ್ಲಿ 101ನೇ ರ‍್ಯಾಂಕ್ ಹಾಗೂ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಮುಧೋಳದ ಸೌಭಾಗ್ಯ ಬೀಳಗಿಮಠ, ಯೋಗಸಾಧಕಿ ಮಂಜುಳಾ ಇಟಗಿ ಹಾಗೂ ಭಕ್ತಿಸೇವೆ ವಹಿಸಿಕೊಂಡಿದ್ದ ಆರ್.ಬಿ. ಡಂಬಳಮಠ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜಗದ್ಗುರು ಅನ್ನದಾನೀಶ್ವರ ಮಠದ 9ನೇ ಪೀಠಾಧಿಪತಿ ವೆಂಕಟಾಪೂರ ಶ್ರೀಗಳ ಮೂರ್ತಿ ಪಲ್ಲಕ್ಕಿ ಉತ್ಸವ ಹಾಗೂ ಶರಣೆ ಅಕ್ಕಮಹಾದೇವಿ ಭಾವಚಿತ್ರ ಮೆರವಣಿಗೆ ಜರುಗಿತು. ಶ್ರೀ ಮಹಾಲಿಂಗ ಸ್ವಾಮೀಜಿ, ಶ್ರೀ ಮರುಳಾರಾಧ್ಯ ಶಿವಾಚಾರ್ಯ, ಡಾ.ಬಸವರಾಜ ಧಾರವಾಡ, ಜಗದ್ಗುರು ಅನ್ನದಾನೀಶ್ವರ ಅಕ್ಕನ ಬಳಗದವರು ಉಪಸ್ಥಿತರಿದ್ದರು.

ಡಾ.ಬಿ.ಜಿ. ಜವಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕರಾದ ಎಸ್.ಎಸ್. ಇನಾಮತಿ, ಎಸ್.ಎಸ್. ಮಠದ ನಿರೂಪಿಸಿದರು.